# ಆಹಾ ಸುದ್ದಿ!

★ ಸಸಿತೋಟ



ಚೀನಾದ ಹೆನಾನ್‌ನಲ್ಲಿ ಈಚೆಗೆ ವಾಹನಗಳ ಪ್ರದರ್ಶನ ನಡೆಯಿತು. ವಾಹನಗಳಿಗೆ ದೃಷ್ಟಿ ತಗುಲಬಾರದೆಂದು ಜೊತೆಗೆ ರೂಪದರ್ಶಿಗಳನ್ನು ನಿಲ್ಲಿಸುವ ಸಂಪ್ರದಾಯ ಇರುವುದೇನೋ ಸರಿ. ಆದರೆ ಬಿಕಿನಿ ಧರಿಸಿದ್ದ ರೂಪದರ್ಶಿಗಳ ಬೆನ್ನಿಗೆ ಎರಡು ಡಿಜಿಟ್‌ನ ಬಾರ್‌ಕೋಡ್ ಹಾಕಿರುವುದು ಯಾಕೆಂದು ತಿಳಿಯದೆ ಬಹಳ ಮಂದಿ ಅದನ್ನು ಮೊಬೈಲ್‌ನಲ್ಲಿ ಕ್ಲಿಕ್ಕಿಸಿಕೊಂಡರಂತೆ. ಬಾರ್‌ಕೋಡ್ ಅನ್ನು ಡಿಕೋಡ್ ಮಾಡಿದಾಗ ಸಿಗುವ ಬೆಲೆ ಕಾರಿಗೋ, ಬಿಕಿನಿಗೋ ಅಥವಾ ಧರಿಸಿದ್ದ ರೂಪದರ್ಶಿಗೋ ಎಂದು ಬಹಳ ಮಂದಿಗೆ ಗೊಂದಲವಾಗಿರಬಹುದು.

ಅಮೆರಿಕಾದಲ್ಲಿ ಖ್ಯಾತ  ಕಂಪೆನಿಯ ಇತ್ತೀಚಿನ ಮಾದರಿಯ ಲ್ಯಾಪ್‌ಟಾಪ್ ಖರೀದಿಸಿದವರು ಪದೇ ಪದೇ ಲ್ಯಾಪ್‌ಟಾಪ್ ಒರೆಸಿದ್ದೇ ಒರೆಸಿದ್ದಂತೆ. ಎಷ್ಟು ಒರೆಸಿದರೂ ಬೆಕ್ಕಿನ ಮೂತ್ರದ ವಾಸನೆ ಹೋಗದೆ ಸಾಕು ಬೆಕ್ಕನ್ನು ಆಚೆ ಅಟ್ಟಿದ್ದೂ ಆಯ್ತು. ಕೆಟ್ಟ ವಾಸನೆಯಿಂದ ಕೆಟ್ಟ ಸಿಟ್ಟು ಬಂದ ಗ್ರಾಹಕರು ಕಂಪೆನಿಗೆ ದೂರು ನೀಡಿದರಂತೆ. ಕೊನೆಗೂ ಗೊತ್ತಾಗಿದ್ದು ತಯಾರಿಕಾ ಹಂತದಲ್ಲಿ ಈ ವಾಸನೆ ಹುಟ್ಟಿಕೊಂಡಿದೆ ಎಂದು. ಕೆಲವು ಕಂಪೆನಿಗಳು ಸ್ಮಾರ್ಟ್‌ಫೋನ್‌ಗಳ ಆ್ಯಕ್ಸೆಸ್ಸರಿಗಳಿಗೆ ಸುವಾಸನೆ ಪೂಸಿವೆ. ಅದೇ ರೀತಿ ಈ ವಾಸನೆ ಅಂದುಕೊಂಡಿದ್ದರೆ ತೊಂದರೆ ಇರುತ್ತಿರಲಿಲ್ಲ!



ಬ್ರಿಟನ್ನಿನ ಈ ನಾಯಿ ಒಜ್ಜಿ ಎತ್ತರ ಜಿಗಿತದಲ್ಲಿ ದಾಖಲೆ ಮಾಡಿದೆ. 3.5 ಮೀಟರ್ ಎತ್ತರಕ್ಕೆ ಕಟ್ಟಿದ ಹಗ್ಗವನ್ನು 18.22 ಸೆಕೆಂಡ್‌ನಲ್ಲಿ ಜಿಗಿಯಿತಂತೆ. ಪಾಶ್ಚಾತ್ಯರಿಗೊಂದು ಖಯಾಲಿ. ತಮ್ಮ ಸಾಕು ಪ್ರಾಣಿಗಳನ್ನು ಆಡಿಸಿ, ಓಡಿಸಿ, ಹಾಡಿಸಿ, ಕೊನೆಗೆ  ಫ್ಯಾಷನ್ ಷೋನಲ್ಲಿ ಓಡಾಡಿಸಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಮಕ್ಕಳನ್ನು ಸ್ಪರ್ಧಾತ್ಮಕ ಜಗತ್ತಿಗೆ ತಯಾರು ಮಾಡುವ ಹಾಗೇ ಸಾಕು ಪ್ರಾಣಿಗಳನ್ನು ತಯಾರು ಮಾಡುತ್ತಿದ್ದಾರೆ.

ಶ್ರೀಲಂಕಾದಲ್ಲಿ ನಳಿನ್ ಹಾಗೂ ನಿಸಾನ್‌ಸಲಾ ಮದುವೆ ಸಂದರ್ಭದಲ್ಲಿ ಗಿನ್ನೆಸ್ ದಾಖಲೆ ಮಾಡಿದರು. ವಧುವಿನ ಗೆಳತಿ (ಬ್ರೈಡ್‌ಮೇಡ್) ಯರ ಸಂಖ್ಯೆ 126 ಇತ್ತಂತೆ. ಈ ಹಿಂದೆ ಥಾಯ್ಲೆಂಡ್‌ನಲ್ಲಿ ಮುರಿದಿದ್ದ ದಾಖಲೆಯಲ್ಲಿ 96 ಮಂದಿ ಇದ್ದರಂತೆ. ಅಂತೂ ದಾಖಲೆ ಮಾಡಿದ ಖುಷಿ ದಂಪತಿಗೆ. ಸಮಾರಂಭಕ್ಕೆ ಕಳೆ ಕಟ್ಟಿದಂತೆಯೂ  ಆಯ್ತು. ವರನ ದೃಷ್ಟಿ ಆಚೀಚೆ ಹೋಗದಂತೆ ವಧು ಎಷ್ಟು ಕಷ್ಟ ಪಟ್ಟಳೋ!



ದಕ್ಷಿಣ ಕೊರಿಯಾದ ಬುಸಾನ್‌ನಲ್ಲಿ ಕೊಠಡಿಯಲ್ಲಿ ಕುಳಿತ 70 ಮಂದಿ ವಿದ್ಯಾರ್ಥಿಗಳು 12 ಗಂಟೆ ಕಾಲ 'ವಿ ಕ್ಯಾನ್ ಡೂ ಇಟ್'' ಎಂದು ಒಂದೇ ಸಮನೆ ಮಂತ್ರ ಜಪಿಸಿದರಂತೆ. ಇದು ಯಾವುದೇ ದಾಖಲೆ ಮುರಿಯಲು ಅಲ್ಲ. ಸ್ಯಾಮ್ಸಂಗ್ ಕಂಪೆನಿಯಲ್ಲಿ ಉದ್ಯೋಗ ಪಡೆಯಲು ಪರೀಕ್ಷೆ, ಸಂದರ್ಶನಕ್ಕೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳಂತೆ. ಸದ್ಯ, ಅಲ್ಲಿ 12 ಗಂಟೆ ಕಾಲ ಕೂಗಿಕೊಂಡರೂ ಯಾರೂ ಹುಚ್ಚರು, ಮೂಢನಂಬಿಕೆ ಎಂದು ಹಣೆಪಟ್ಟಿ ಅಂಟಿಸಲು ಬಂದಿರಲಿಲ್ಲವಂತೆ.



ಬಸವನಹುಳುವಿನ ಫೇಷಿಯಲ್ ಆಯಿತು, ಈಗ ಹೆಬ್ಬಾವಿನ ಮಸಾಜ್ ಸರದಿ. ಇಂಡೋನೇಷ್ಯಾದ ಸ್ಪಾಗಳಲ್ಲಿ ಈ ಬೃಹತ್ ಸರೀಸೃಪಗಳು ಮೈ ಮೇಲೆ ಸರಿದಾಡುವಾಗ ಮಸಾಜ್‌ನ ಮಜಾ ಅನುಭವಿಸುವ ಮಾತಿರಲಿ, ಭಯದಿಂದ ಎದ್ದೋಡಲು ಸಜ್ಜಾಗುವವರೇ ಬಹಳ ಮಂದಿ ಎಂಬುದು ಸ್ಪಾ ಮಾಲೀಕರ ಅನಿಸಿಕೆಯಂತೆ. ಹೊಸತು ಎಂದೊಡನೆ ಒಂದು ಕೈ ನೋಡೇ ಬಿಡೋಣ ಎನ್ನುವವರು ಕೂಡಾ ಕಾಲಿಗೆ ಬುದ್ಧಿ ಹೇಳುತ್ತಾರಂತೆ.